ಕರ್ನಾಟಕ ಸರ್ಕಾರ

## ರಾಷ್ಟ್ರೀಯ ಹೆದ್ದಾರಿ ವಿಭಾಗ ಬೆಂಗಳೂರು

**ಸಿ.ಎಫ್.ಸಿ ಕಟ್ಟಡ, ನೃಪತುಂಗ ರಸ್ತೆ,**

**ಬೆಂಗಳೂರು–560001,**

**ದೂರವಾಣಿ : 080-22211207**

**E-mail:** executive_engi@yahoo.com

-::-

ರಾಷ್ಟ್ರೀಯ ಹೆದ್ದಾರಿ ಗುಣನಿಯಂತ್ರಣ ಉಪವಿಭಾಗ, ಬೆಂಗಳೂರು ಕಛೇರಿಗೆ ಕಂಪ್ಯೂಟರ್ ಅಪರೇಟರ್, ವಾಹನ ಚಾಲಕ, ಲ್ಯಾಬೋರೆಟರಿ ಅಸ್ಸಿಸ್ಟೆಂಟ್ ಹಾಗೂ ಕಾವಲುಗಾರರು(ವಾಚ್ ಮೆನ್) ನೌಕರರನ್ನು ಹೊರಗುತ್ತಿಗೆ ಆಧಾರದಲ್ಲಿ **2026–27** ನೇ ಸಾಲಿನ (ದಿನಾಂಕ: 01.08.2026 ರಿಂದ 31.07.2027) ರ ಅವಧಿಗೆ ಹೊರಸಂಪನ್ಮೂಲ ಏಜೆನ್ಸಿಯ ಮುಖಾಂತರ ಪಡೆಯುವ ಬಗ್ಗೆ.

## :ಟೆಂಡರ್ ದಸ್ತಾವೇಜುಗಳು:

# ಅನುಸೂಚಿ


| ಕ್ರಮ ಸಂಖ್ಯೆ | ವಿಷಯ | ಪುಟ ಸಂಖ್ಯೆ |
|---|---|---|
| 1. | ಟೆಂಡರ್ ಅಧಿಸೂಚನೆ | 3–4 |
| 2. | ಟೆಂಡರ್ ಫಾರಂ (ಅನುಬಂಧ–1) | 5 |
| 3. | ಟೆಂಡರ್ ದಸ್ತಾವೇಜುನೊಂದಿಗೆ ಲಗತ್ತಿಸಬೇಕಾದ ದಾಖಲೆಗಳ ಪಟ್ಟಿ(ಅನುಬಂಧ–2 | 6–7 |
| 4. | ಅನುಬಂಧ – 3 | 8 |
| 5. | ಟೆಂಡರ್ ದಾಖಲೆಗಳು ಮತ್ತು ಟೆಂಡರ್‌ದಾರರಿಗೆ ಸೂಚನೆಗಳು | 9–16 |
| 6. | ಹೊರಗುತ್ತಿಗೆ ನೀಡುವ ಬಗ್ಗೆ ಸಿಬ್ಬಂದಿ ವಿವರದ ಪಟ್ಟಿ (ಅನುಬಂಧ–3) | 17 |

**GOVERNMENT OF KARNATAKA**
**(Public Works Department)**
**NATIONAL HIGHWAYS**

Office of the Executive Engineer, National Highway Division,
Bangalore, -560001.

Phone No. 080-22211207 Email : executive_engi@yahoo.com

No.EE/NHD/BNG/Outsource staff/NIT/2026-27/ Date: 22.07.2026

**Short term E-TENDER NOTIFICATION(IFB) No- 07/2026-27 dated:22.07.2026**

The Executive Engineer, National Highway Division, Bangalore on behalf of Governor of Karnataka, invites Single Cover Bid, as per Karnataka Transparency in Public Procurement Act 2000, Eligible Class of Man Power Agencies/contractor approved firms for the work given below. For detailed Notification, Condition and E-Tendering process can be obtained by logging on to https://eprocure.gov.in . The details of work and time schedule are as under.

| Sl. No. | Name of Work | Amount put to Tender (In Rs) | E.M.D. (In Rs) | Tender fee to be paid (In Rs) | Time Period for services |
|---|---|---|---|---|---|
| 1 | 2 | 3 | 4 | 5 | 6 |
| 1 | Annual Maintenance for providing Man power to Quality Control Office & Supplying laboratory equipment's and Consumables to NH QC sub division, Bangalore for the year 2026-2027 period 01-08-2026 to 31-07-2027. | 17.96 Lahks<br><br>(Excluding Service & GST) | Rs.45,000/-<br><br>Shall be in the form of FDR or BG In favour of 'Executive Engineer, National Highway Division, Bengaluru, Payable at Bengaluru'<br><br>(scanned copy to be uploaded in the e-portal) | Rs.1,000/- paid through online payment mode only in Bharathkosh website www.bharathkosh .gov.in<br><br>(scanned copy to be uploaded in the e-portal) | 12 Months |

Bid document with detailed terms and conditions will be available online on CPP portal of https://eprocure.gov.in .

Last date for receipt of tenders: 31.07.2026 Up to 16:30 Hours: Opening of Bid in the CPP Portal **on 01.08.2026 @ 11.00 hrs** . Cost of Tender documents fee may be paid through online payment mode only in Bharathkosh website www.bharathkosh.gov.in. Special attention may be paid to select PAO Code 034807- PAO(NH) Bengaluru, under that select RO civil Bengaluru

DDO Code 234809 – Superintendent Engineer. Online Receipts of tender document fee shall be uploaded compulsory in the e-portal

Original FDR/ B.G, Receipt of tender document fee uploaded in e-portal during uploading the tender documents and along with the Technical Bid uploaded documents (Except Financial Bid) has to be submitted to the Office of Executive Engineer, National Highway Division, Bangalore - 560001 after the last date for submission of tender and before opening of Bid (Technical) i.e on **31.07.2026 before 16:30 hrs.**

Any other details regarding the work can be obtained from this office during office hours in person or by logging on to https://eprocure.gov.in.

Sd/-
Executive Engineer,
National Highway Division
Bengaluru.

1. Copy submitted to Chief Engineer, National Highways, Bangalore for kind information.
2. Copy submitted to the Superintending Engineer National Highway Circle, Bangalore for kind information.
3. Copy to the Assistant Executive Engineer, NH QC Sub division, Bangalore for information.
4. Copy to the Accounts Branch of division office for information.

Sd/-
Executive Engineer,
National Highway Division
Bengaluru.

# <u>ಅನುಬಂಧ – 1</u>

## ಟೆಂಡರ್ ಫಾರಂ

**ಇವರಿಗೆ,**

ಕಾರ್ಯನಿರ್ವಾಹಕ ಇಂಜಿನಿಯರ್
ರಾಷ್ಟ್ರೀಯ ಹೆದ್ದಾರಿ ವಿಭಾಗ,
4ನೇ ಮಹಡಿ, ಅರವಿಂದ ಭವನ,
ಬೆಂಗಳೂರು.

ಮಾನ್ಯರೇ,

ನಾನು/ ನಾವು ____________________________________________

ಮಾಲೀಕರು/ಪಾಲುದಾರರು ____________________________________________

ಟೆಂಡರ್ ಅಧಿಸೂಚನೆ ಸಂಖ್ಯೆ ____________________________________________

ಪ್ರಕಾರ ಟೆಂಡರ್ ಸಲ್ಲಿಸುತ್ತಿದ್ದೇನೆ/ದ್ದೇವೆ. ಒಪ್ಪಂದದ ಹಾಗೂ ಟೆಂಡರ್ ನಿಬಂಧನೆಗಳನ್ನು ಹಾಗೂ ಕರಾರಿನ ನಿಯಮಗಳನ್ನು ಓದಿ ಅರ್ಥ ಮಾಡಿಕೊಂಡಿರುತ್ತೇನೆ/ವೆ.

ಟೆಂಡರಿನ ನಿಬಂಧನೆಗಳನ್ನು ಪಾಲಿಸಲು ನನ್ನ/ನಮ್ಮ ಒಪ್ಪಿಗೆ ಇರುತ್ತದೆ.

ತಮ್ಮ ನಂಬುಗೆಯ

ಟೆಂಡರುದಾರರ ಸಹಿ :

ಹೆಸರು :

ಪದನಾಮ:

ಸ್ಥಳ:

ದಿನಾಂಕ: ಕಛೇರಿ /ಸಂಸ್ಥೆಯ ಮುದ್ರಾಂಕ

## ಅನುಬಂಧ – 2

**ಇವರಿಗೆ,**
ಕಾರ್ಯನಿರ್ವಾಹಕ ಇಂಜಿನಿಯರ್
ರಾಷ್ಟ್ರೀಯ ಹೆದ್ದಾರಿ ವಿಭಾಗ,
4ನೇ ಮಹಡಿ, ಅರವಿಂದ ಭವನ
ಬೆಂಗಳೂರು.

ಮಾನ್ಯರೇ

ರಾಷ್ಟ್ರೀಯ ಹೆದ್ದಾರಿ ವಿಭಾಗ ಗುಣ ನಿಯಂತ್ರಣ ಉಪವಿಭಾಗ, ಬೆಂಗಳೂರು ಕಛೇರಿಗೆ ಕಂಪ್ಯೂಟರ್ ಅಪರೇಟರ್, ವಾಹನ ಚಾಲಕ, ಲ್ಯಾಬೋರೇಟರಿ ಅಸ್ಸಿಸ್ಟೆಂಟ್ ಹಾಗೂ ಕಾವಲುಗಾರರು(ವಾಚ್ ಮೆನ್) ನೌಕರರನ್ನು (https://eprocure.gov.in ವೆಬ್‌ಸೈಟ್‌ನಲ್ಲಿ ಒದಗಿಸಿರುವಂತೆ) ಹೊರಗುತ್ತಿಗೆ ಆಧಾರದಲ್ಲಿ (ದಿನಾಂಕ: 01.08.2026 ರಿಂದ 31.07.2027) ರ ಅವಧಿಗೆ ಹೊರಸಂಪನ್ಮೂಲ ಏಜೆನ್ಸಿಯ ಮುಖಾಂತರ ಪಡೆಯುವ ಬಗ್ಗೆ ಇ–ಪ್ರೊಕ್ಯೂರ್‌ಮೆಂಟ್ (CPP Portal) ನಲ್ಲಿಟೆಂಡರ್ ಪ್ರಕಟಣೆ.

**ಟೆಂಡರ್ ದಸ್ತಾವೇಜುನೊಂದಿಗೆ ಏಜೆನ್ಸಿದಾರರು/ಟೆಂಡರ್‌ದಾರರು ಲಗತ್ತಿಸಬೇಕಾದ ದಾಖಲೆಗಳ ಪಟ್ಟಿ (ಟೆಂಡರ್ ಫಾರಂ – ಭಾಗ ಎ)**

| ಕ್ರಮ ಸಂಖ್ಯೆ | ವಿವರ | ಲಗತ್ತಿಸಿದೆಯೇ ಎಂದು ತಿಳಿಸುವುದು | ಪುಟ ಸಂಖ್ಯೆ ನಮೂದಿಸುವುದು |
|---|---|---|---|
| 1 | ಟೆಂಡರ್ ಪ್ರಕಟಣೆ ಸಂಖ್ಯೆ ಹಾಗೂ ದಿನಾಂಕ | | |
| 2 | ಟೆಂಡರ್ ಫಾರ್ಮ್ – ಗುತ್ತಿಗೆದಾರರ ಹೆಸರು ಮತ್ತು ಸಂಸ್ಥೆ ಪೂರ್ಣ ವಿಳಾಸ (ಅನುಬಂಧ – 1) | | |
| 3 | ಟೆಂಡರ್‌ದಾರರ ಕಾರ್ಮಿಕ ಇಲಾಖೆ ನೋಂದಣಿ ಮತ್ತು ನವೀಕರಣ ವಿವರಗಳು (ಅದರ ಪ್ರತಿಗಳನ್ನು ಲಗತ್ತಿಸಬೇಕು.) | | |
| 4 | ದೂರವಾಣಿ ಸಂಖ್ಯೆ, ಮೊಬೈಲ್ ಸಂಖ್ಯೆ ಮತ್ತು ವಿಳಾಸ<br>ಕಛೇರಿ :<br>ಮನೆ : | | |
| 5 | ಟೆಂಡರ್ ಫೀ – ರೂ.1,000–00 ನ್ನು ಆನ್‌ಲೈನ್ ಮುಖಾಂತರ Bharathkosh website www.bharathkosh.gov.in ನಲ್ಲಿ ಪಾವತಿಸಿ ಚಲನ್ ಪ್ರತಿಯನ್ನು ಕಡ್ಡಾಯವಾಗಿ (CPP Portal) ನಲ್ಲಿ ಅಪ್‌ಲೋಡ್ ಮಾಡುವುದು. | | |
| 6 | ಇ.ಎಂ.ಡಿ. ವಿವರಗಳು ಹಾಗು ಬ್ಯಾಂಕ್ ಹೆಸರು ರೂ.45,000/–ಮೊತ್ತದ ಬ್ಯಾಂಕ್ ಗ್ಯಾರಂಟಿ/ಎಫ್.ಡಿ.ಆರ್‌ನ್ನು ಕಡ್ಡಾಯವಾಗಿ (CPP Portal) ನಲ್ಲಿ ಅಪ್‌ಲೋಡ್ ಮಾಡಿ ಮೂಲ ಪ್ರತಿಯನ್ನು ಕಛೇರಿಗೆ ಸಲ್ಲಿಸುವುದು. | | |
| 7 | ಕರ್ನಾಟಕ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆ ನೋಂದಣಿ ಕಾಯ್ದೆ 1961 ರಡಿ 2024–25 ಮತ್ತು 2025–26 ರಲ್ಲಿ ನೋಂದಣಿಯಾದ ಬಗ್ಗೆ ವಿವರಗಳು (ಫಾರ್ಮ ಸಿ ಚಾಲ್ತಿ ನೋಂದಣಿ ಪತ್ರದ ಪ್ರತಿ ಲಗತ್ತಿಸಬೇಕು) | | |
| 8 | ಪೋಲಿಸ್ ಇಲಾಖೆಯ ನೋಂದಣೆ ಪತ್ರ (ಪ್ರೈವೇಟ್ ಏಜೆನ್ಸಿರೂಲ್ 2005ರಡಿ ಕರ್ನಾಟಕ ಪ್ರೈವೇಟ್ ಸೆಕ್ಯುರಿಟಿ ಎಜೆನ್ಸಿ ಕಾಯ್ದೆ 2008ರ ಪ್ರಕಾರ ಪೋಲೀಸ್ ಅನುಮತಿ ಪತ್ರ.) | | |

| | | | |
|---|---|---|---|
| 9 | GST/ಸರ್ವೀಸ್ ಟ್ಯಾಕ್ಸ್ ನೋಂದಣಿ ವಿವರಗಳು ಮತ್ತು 2024–25 ಮತ್ತು 2025–26 ನೇ ಸಾಲಿನ ರಿಟರ್ನ್ಸ್ ಪ್ರತಿ. (ಪ್ರಮಾಣ ಪತ್ರದ ಪ್ರತಿ ಲಗತ್ತಿಸಬೇಕು) | | |
| 10 | ಇ.ಪಿ.ಎಫ್ ಕಾಯ್ದೆ ಅಡಿಯಲ್ಲಿ ಪಡೆದಿರುವ ನೋಂದಣಿ ಪತ್ರ ಮತ್ತು ಕೋಡ್ ಸಂಖ್ಯೆ ವಿವರ ಮತ್ತು 2024–25 ಮತ್ತು 2025–26 ನೇ ಸಾಲಿನಲ್ಲಿ ಪಾವತಿಸಿದ ದಾಖಲೆಗಳು | | |
| 11 | ಇ.ಎಸ್.ಐ ಕಾಯ್ದೆ ಅಡಿಯಲ್ಲಿ ಪಡೆದಿರುವ ನೋಂದಣಿ/ ನವೀಕರಣ ಪ್ರಮಾಣ ಪತ್ರ ಮತ್ತು ಕೋಡ್ ಸಂಖ್ಯೆ ವಿವರ ಮತ್ತು 2024–25 ಮತ್ತು 2025–26 ಸಾಲಿನಲ್ಲಿ ರಿಟರ್ನ್ಸ್ ಸಲ್ಲಿಸಿರುವ ದಾಖಲೆಗಳು (ಪ್ರತಿ ಲಗತ್ತಿಸುವುದು) | | |
| 12 | ವೃತ್ತಿ ತೆರಿಗೆ ನೋಂದಣಿ ವಿವರಗಳು ಮತ್ತು ಕಳೆದ ಮೂರು ವರ್ಷದ **ಕ್ಲಿಯರೆನ್ಸ್ ಸರ್ಟಿಫಿಕೇಟ್** 2023–24, 2024–25, 2025–26 (ಪ್ರತಿ ಲಗತ್ತಿಸುವುದು) | | |
| 13 | ಪ್ಯಾನ್‌ಕಾರ್ಡ್ ನೊಂದಣಿಯಾಗಿರಬೇಕು (ಪ್ರತಿ ಲಗತ್ತಿಸುವುದು) | | |
| 14 | 3 ವರ್ಷಗಳ ಐ.ಟಿ. ರಿಟನ್ಸ್ ದಾಖಲಾತಿ 2023–24, 2024–25, 2025–26 (ಪ್ರತಿ ಲಗತ್ತಿಸುವುದು–ಐ.ಟಿ.ಆರ್. – 5 ಸಂಸ್ಥೆಯ ಹೆಸರಿನಲ್ಲಿರಬೇಕು) | | |
| 15 | ಕಳೆದ ಮೂರು ವರ್ಷಗಳಲ್ಲಿ ಟೆಂಡರ್‌ದಾರರು ಮಾನವ ಸಂಪನ್ಮೂಲ ಸೇವೆ ಒದಗಿಸಿದ ಸಂಬಂಧ ವಾರ್ಷಿಕ ವಹಿವಾಟುಗಳ ವಿವರಗಳು 2023–24, 2024–25, 2025–26 (ಪ್ರತಿಯೊಂದು ವರ್ಷದಲ್ಲಿ ಕನಿಷ್ಠ 36.00 **ಲಕ್ಷ ನಿರ್ವಹಿಸಿರಬೇಕು**) ವಾರ್ಷಿಕ ವಹಿವಾಟು UDIN ನಂಬರೊಂದಿಗೆ Charted Accountant ರವರಿಂದ ಧೃಡೀಕರಣ ಗೊಂಡಿರಬೇಕು | | |
| 16 | ಚಾಲ್ತಿ ವರ್ಷದಲ್ಲಿ ಟೆಂಡರ್‌ದಾರರು ಬೇರೆ ಬೇರೆ ಸರ್ಕಾರಿ ಅರೆಸರ್ಕಾರಿ ಸಂಸ್ಥೆಗಳಿಗೆ ಮಾನವ ಸಂಪನ್ಮೂಲ ಸೇವೆ ಒದಗಿಸುತ್ತಿರುವ ಬಗ್ಗೆ ವಿವರಗಳು, (ಸಂಸ್ಥೆಗಳ ಕಾರ್ಯದೇಶ ಪ್ರತಿಗಳನ್ನು ಲಗತ್ತಿಸಬೇಕು). | | |
| 17 | ಕಳೆದ 2023–24, 2024–25, 2025–26 ವರ್ಷಗಳಲ್ಲಿ ಸೇವೆ ನೀಡಿದ ಸಂಸ್ಥೆಗಳಿಂದ ಟೆಂಡರ್‌ದಾರರು ಯಶಸ್ವಿಯಾಗಿ ಸೇವೆ ಒದಗಿಸಿದ್ದಾರೆಂಬ ಎಂಬ ಬಗ್ಗೆ ಸಂಬಂಧಪಟ್ಟ ಸಂಸ್ಥೆಗಳಿಂದ ಪಡೆದ ಅನುಭವ ಪ್ರಮಾಣ ಪತ್ರ ಕಡ್ಡಾಯವಾಗಿ ಲಗತ್ತಿಸಬೇಕು. | | |
| | **ವಿಶೇಷ ಸೂಚನೆ ಮೇಲಿನ ಎಲ್ಲಾ ದಾಖಲಾತಿಗಳನ್ನು ಗೆಜೆಟೆಡ್ ಆಫೀಸರ್‌ರಿಂದ ಕಡ್ಡಾಯವಾಗಿ ದೃಢೀಕರೀಸಿ ಲಗತ್ತಿಸುವುದು ಹಾಗೂ ಮೇಲೆ ತಿಳಿಸಿದ ಕ್ರಮ ಸಂಖ್ಯೆ 1 ರಿಂದ 17 ರತನಕದ ಎಲ್ಲಾ ದಾಖಲೆಗಳು ಅವಶ್ಯಕತೆ ಇರುತ್ತದೆ ದಾಖಲೆಗಳನ್ನು ಸರಿಯಾಗಿ ಸಲ್ಲಿಸದಿದ್ದರೆ ಅಂತಹ ಏಜೆನ್ಸಿ/ಟೆಂಡರ್ ದಾರರ ಬಿಡ್‌ಅನ್ನು ಅನರ್ಹತೆ ಎಂದು ಪರಿಗಣಿಸಲಾಗುವುದು.** | | |

ಟೆಂಡರ್ ದಸ್ತಾವೇಜುಗಳನ್ನು ಪರಿಶೀಲಿಸಿ ಮೇಲಿನಂತೆ ಮಾಹಿತಿ ನೀಡಿದ್ದು, ನಾನು ನೀಡಿರುವ ಮಾಹಿತಿಯು ಎಲ್ಲಾ ರೀತಿಯಿಂದ ಸರಿ ಇದೆ ಎಂದು ದೃಢೀಕರಿಸಿದೆ.

ದಿನಾಂಕ:

ಸ್ಥಳ: ಟೆಂಡರುದಾರರ ಹೆಸರು, ಸಹಿ ಮತ್ತು ಮೊಹರು

## ಅನುಬಂಧ –3

**ಇವರಿಗೆ,**
ಕಾರ್ಯನಿರ್ವಾಹಕ ಇಂಜಿನಿಯರ್
ರಾಷ್ಟ್ರೀಯ ಹೆದ್ದಾರಿ ವಿಭಾಗ,
4ನೇ ಮಹಡಿ, ಅರವಿಂದ ಭವನ,
ಬೆಂಗಳೂರು.

ಮಾನ್ಯರೇ

ವಿಷಯ:– ರಾಷ್ಟ್ರೀಯ ಹೆದ್ದಾರಿ ವಿಭಾಗ ಗುಣ ನಿಯಂತ್ರಣ ಉಪವಿಭಾಗ, ಬೆಂಗಳೂರು ಕಛೇರಿಗೆ ಕಂಪ್ಯೂಟರ್ ಅಪರೇಟರ್, ವಾಹನ ಚಾಲಕ, ಲ್ಯಾಬೋರೆಟರಿ ಅಸ್ಸಿಸ್ಟೆಂಟ್ ಹಾಗೂ ಕಾವಲುಗಾರರು (ವಾಚ್ ಮೆನ್) ನೌಕರರನ್ನು (https://eprocure.gov.in ವೆಬ್‌ಸೈಟ್‌ನಲ್ಲಿ ಒದಗಿಸಿರುವಂತೆ) ಹೊರಗುತ್ತಿಗೆ ಆಧಾರದಲ್ಲಿ (ದಿನಾಂಕ: 01–08–2026 ರಿಂದ 31-07–2027) ರ ಅವಧಿಗೆ ಹೊರಸಂಪನ್ಮೂಲ ಏಜೆನ್ಸಿಯ ಮುಖಾಂತರ ಪಡೆಯುವ ಬಗ್ಗೆ.

************

<u>ಟೆಂಡರ್‌ಫಾರಂ ಭಾಗ–ಬಿ (ಆರ್ಥಿಕ ಬಿಡ್) – ಶೇಕಡವಾರು ದರವನ್ನು ಖಡ್ಡಾಯವಾಗಿ ಇ–ಪ್ರೊಕ್ಯುರ್‌ಮೆಂಟ್‌ನಲ್ಲಿ ಮಾತ್ರ ಸಲ್ಲಿಸತಕ್ಕದ್ದು.</u>

| | |
|---|---|
| ರಾಷ್ಟ್ರೀಯ ಹೆದ್ದಾರಿ ವಿಭಾಗ ಗುಣ ನಿಯಂತ್ರಣ ಉಪವಿಭಾಗ, ಬೆಂಗಳೂರು ಕಛೇರಿಗೆ ಕಂಪ್ಯೂಟರ್ ಅಪರೇಟರ್, ವಾಹನ ಚಾಲಕ, ಲ್ಯಾಬೋರೆಟರಿ ಅಸ್ಸಿಸ್ಟೆಂಟ್ ಹಾಗೂ ಕಾವಲುಗಾರರು (ವಾಚ್ ಮೆನ್) ನೌಕರರನ್ನು) ಹೊರಗುತ್ತಿಗೆ ಆಧಾರದಲ್ಲಿ (ದಿನಾಂಕ: 01–08–2026 ರಿಂದ 31-07–2027) ರ ಅವಧಿಗೆ ಅವಧಿಗೆ ನೌಕರರ ಸೇವೆಯನ್ನು ಪಡೆಯಲು ಟೆಂಡರ್ ಪ್ರಕಟಣೆಯಲ್ಲಿರುವ ಹುದ್ದೆಗಳಿಗೆ ಟೆಂಡರುದಾರರು ಮಾನವ ಸೇವೆ ಒದಗಿಸುವ ಬಗ್ಗೆ ಸೇವಾವೆಚ್ಚವನ್ನು ನಮೂದಿಸಬೇಕು. | BOQ ಅನ್ನು ಪ್ರತ್ಯೇಕವಾಗಿ ಲಗತ್ತಿಸಲಾಗಿದೆ.<br><br>ಸೇವಾ ವೆಚ್ಚ ಶೇಕಡಾವಾರು ದರ........................%<br><br>ಅಕ್ಷರಗಳಲ್ಲಿ ........................ ...........................<br>**(ಸೇವಾ ವೆಚ್ಚವನ್ನು ಶೇಕಡಾ 1%, 2% ಇತ್ಯಾದಿಯಾಗಿ ನಮೂದಿಸಬೇಕು. ರೂಪಾಯಿಗಳಲ್ಲಿ ಮೊತ್ತವನ್ನು ನಮೂದಿಸಬಾರದು ಹಾಗೂ ಸೇವಾ ವೆಚ್ಚವನ್ನು 0% ಎಂದು ನಮೂದಿಸಿದಲ್ಲಿ ಟೆಂಡರು ತಿರಸ್ಕರಿಸಲಾಗುವುದು)** |

ದಿನಾಂಕ:
ಸ್ಥಳ: ಟೆಂಡರುದಾರರ ಹೆಸರು, ಸಹಿ ಮತ್ತು ಮೊಹರು.

**ಟೆಂಡರ್ ದಾಖಲೆಗಳು ಮತ್ತು ಟೆಂಡರ್‌ದಾರರಿಗೆ ಸೂಚನೆಗಳು:–**

1. ಟೆಂಡರ್‌ಉದ್ದೇಶ:– ರಾಷ್ಟ್ರೀಯ ಹೆದ್ದಾರಿ ವಿಭಾಗ ಗುಣ ನಿಯಂತ್ರಣ ಉಪವಿಭಾಗ, ಬೆಂಗಳೂರು ಕಛೇರಿಗೆ ಕಂಪ್ಯೂಟರ್ ಅಪರೇಟರ್, ವಾಹನ ಚಾಲಕ, ಲ್ಯಾಬೋರೆಟರಿ ಅಸ್ಸಿಸ್ಟೆಂಟ್ ಹಾಗೂ ಕಾವಲುಗಾರರು(ವಾಚ್ ಮೆನ್) ನೌಕರರನ್ನು ನೋಂದಾಯಿತ ಹೊರಸಂಪನ್ಮೂಲ ಏಜೆನ್ಸಿಯ ಮುಖಾಂತರ ಪಡೆಯುವ ಬಗ್ಗೆ. ರಾಷ್ಟ್ರೀಯ ಹೆದ್ದಾರಿ ವಿಭಾಗ, ಬೆಂಗಳೂರು ಕಛೇರಿಯಿಂದ ಇ–ಪ್ರೊಕ್ಯೂರ್‌ಮೆಂಟ್ (CPP Portal) ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಒಟ್ಟು ಬೇಕಾಗಿರುವ ಸಿಬ್ಬಂದಿಗಳ ವಿವರ ಅನುಬಂಧ–3 ರಲ್ಲಿ ವಿವರಿಸಿದೆ. ಅನುಬಂಧ–3 ರಲ್ಲಿ ನಮೂದಿಸಿರುವ ಹುದ್ದೆಗಳ ಸಂಖ್ಯೆ ಟೆಂಡರ್ ಅಂಗೀಕಾರದ ಸಮಯದಲ್ಲಿ ಆಡಳಿತಾತ್ಮಕ ಕಾರಣಗಳಿಗಾಗಿ ಬದಲಾವಣೆಗೆ ಒಳಪಟ್ಟಿರುತ್ತದೆ.
   ಮಾನವ ಸಂಪನ್ಮೂಲ ಸೇವೆ ಒದಗಿಸಲು ಅರ್ಹತೆಯುಳ್ಳ ವಿವಿಧ ಕಾಯ್ದೆಗಳ ಕಾನೂನಿನ ಅಡಿಯಲ್ಲಿ ನೊಂದಣಿ ಮಾಡಿಕೊಂಡ ಸಂಸ್ಥೆಗಳು ಮಾತ್ರ ಇ–ಪ್ರೊಕ್ಯೂರ್‌ಮೆಂಟ್(CPP Portal) ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಬಹುದು.

2. **ಟೆಂಡರ್‌ದಾರರ ಅರ್ಹತೆ:–** ಟೆಂಡರ್‌ದಾರರಿಗೆ ಇರಬೇಕಾದ ಅರ್ಹತೆಗಳ ಬಗ್ಗೆ ವಿವರಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್‌ನ ದಸ್ತಾವೇಜು ದಾಖಲೆಗಳಲ್ಲಿ ಟೆಂಡರ್‌ದಾರರಿಗೆ ನೀಡಿದೆ. ಈ ಬಗ್ಗೆ ಯಾವುದೇ ವಿಷಯಗಳ ಬಗ್ಗೆ ಸ್ಪಷ್ಟೀಕರಣ ಬೇಕಾದಲ್ಲಿ ಟೆಂಡರ್‌ದಾರರು ಸ್ಪಷ್ಟೀಕರಣದ ವಿಷಯವನ್ನು ಲಿಖಿತವಾಗಿ ನೀಡಿ ಕಾರ್ಯನಿರ್ವಾಹಕ ಇಂಜಿನಿಯರ್, ರಾಷ್ಟ್ರೀಯ ಹೆದ್ದಾರಿ ವಿಭಾಗ, ಬೆಂಗಳೂರು ಇವರಿಂದ ಮಾಹಿತಿ ಪಡೆಯಬಹುದು.

3. **ಟೆಂಡರ್ ದಾಖಲೆಗಳ ತಿದ್ದುಪಡಿ:** ಟೆಂಡರ್ ಸಲ್ಲಿಸುವ ದಿನಾಂಕಕ್ಕೆ ಮುನ್ನ ಈ ಬಗ್ಗೆ ಇರುವ ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ದಾಖಲೆಗಳನ್ನು ತಿದ್ದುಪಡಿ ಮಾಡುವ/ಬದಲಾಯಿಸುವ ಮತ್ತು ಟೆಂಡರ್ ಅನ್ನು ರದ್ದು ಪಡಿಸುವ ಅಧಿಕಾರ ಟೆಂಡರ್ ಕರೆದಿರುವ ಪ್ರಾಧಿಕಾರ ಹೊಂದಿದೆ. ಈ ರೀತಿ ಯಾವುದೇ ತಿದ್ದುಪಡಿ ಆದಲ್ಲಿ ಟೆಂಡರ್‌ದಾರರಿಗೆ https://eprocure.gov.in CPP ಪೋರ್ಟಲ್ ಮುಖಾಂತರ ತಿಳಿಸಲಾಗುವುದು.

4. **ಟೆಂಡರ್ ದಸ್ತಾವೇಜುಗಳಲ್ಲಿರುವ ದಾಖಲೆಗಳು:–**ಈ ಟೆಂಡರ್‌ನ ದಸ್ತಾವೇಜುಗಳಲ್ಲಿ ಟೆಂಡರ್ ಕರೆದಿರುವ ಬಗ್ಗೆ ವಿವರಗಳು, ಅರ್ಹತೆಗಳು, ನಿಬಂಧನೆಗಳು ಇತ್ಯಾದಿ ವಿವರಗಳು ಲಭ್ಯ ಇದೆ. ಅಲ್ಲದೇ ಈ ಕೆಳಕಂಡ ದಾಖಲೆಗಳು ದಸ್ತಾವೇಜುಗಳಲ್ಲಿ ಲಭ್ಯ ಇದೆ.
   i. ಟೆಂಡರ್ ಆಹ್ವಾನ
   ii. ಟೆಂಡರ್‌ದಾರರಿಗೆ ಸೂಚನೆಗಳು
   iii. ಟೆಂಡರ್‌ದಾರರಿಗೆ ಹಣಕಾಸು ಷೆಡ್ಯೂಲ್ CPP ಪೋರ್ಟಲ್‌ನಲ್ಲಿ ಒದಗಿಸಲಾಗಿದೆ
   iv. ಟೆಂಡರ್‌ಗೆ ಸಂಬಂಧಿಸಿದಂತೆ ಸೂಚನೆಗಳು, ಷರತ್ತುಗಳು ಮತ್ತು ತಾಂತ್ರಿಕ ವಿವರಗಳು
   v. ಕಾರ್ಯಧಾರಿತ ಭದ್ರತೆ (Performance security) ವಿವರಗಳು.

ಟೆಂಡರುದಾರರು ಈ ಎಲ್ಲಾ ದಾಖಲೆಗಳು, ನಿಬಂಧನೆಗಳು ಮತ್ತು ಟೆಂಡರ್‌ನ ಷರತ್ತುಗಳನ್ನು ಹಾಗು ಟೆಂಡರ್‌ದಾರರಿಗೆ ಇರುವ ಅರ್ಹತಾ ಸೂಚನೆಗಳನ್ನು ಪರಿಶೀಲಿಸಿ ಅರ್ಥ ಮಾಡಿಕೊಂಡು ಸೂಕ್ತ ಮಾಹಿತಿ ಮತ್ತು ದಾಖಲಾತಿಗಳೊಂದಿಗೆ ಪೂರ್ಣ ಪ್ರಮಾಣದಲ್ಲಿ ಟೆಂಡರ್ ಸಲ್ಲಿಸುವುದು. **ಅಪೂರ್ಣ ಮಾಹಿತಿಯುಳ್ಳ ಟೆಂಡರನ್ನು ತಿರಸ್ಕರಿಸಲಾಗುವುದು.**

## 5. ಬಿಡ್‌ಗೆ ಸಲ್ಲಿಸಬೇಕಾದ ದಾಖಲೆಗಳು:-

1. ಪೂರ್ಣ ಮಾಹಿತಿಯೊಂದಿಗೆ ಭರ್ತಿ ಮಾಡಿದ ನಿಗದಿತ ಟೆಂಡರ್ ಫಾರಂ – ಅನುಬಂಧ 1
2. ಟೆಂಡರ್‌ದಾರರಿಗೆ ಇರುವ ಅನುಭವ ಮತ್ತು ಅರ್ಹತೆ ಬಗ್ಗೆ ಮಾಹಿತಿ ಹಾಗೂ ದಾಖಲೆಗಳನ್ನು ಸಲ್ಲಿಸಬೇಕು.
3. ಪ್ರಸ್ತುತ ವರ್ಷಕ್ಕೆ ಚಾಲ್ತಿಯಲಿರುವ ಕಾರ್ಮಿಕ ಇಲಾಖೆಯಿಂದ ನೋಂದಣಿಕರಿಸಿದ ಪ್ರಮಾಣ ಪತ್ರದ ದೃಢೀಕೃತ ಪ್ರತಿ.
4. ಕಾರ್ಮಿಕ ಇಲಾಖೆಯಲ್ಲಿ ಪಡೆದ 'FORM C' ಪ್ರಮಾಣ ಪತ್ರದ ದೃಢೀಕೃತ ಪ್ರತಿ.
5. ಟೆಂಡರುದಾರರು ಕಾರ್ಮಿಕ ಕಾಯ್ದೆಯಡಿ ಇಎಸ್‌ಐ ಸಂಸ್ಥೆ ಮತ್ತು ಇಪಿಎಫ್ ಸಂಸ್ಥೆಯ ಅಡಿಯಲ್ಲಿ ಚಾಲ್ತಿಯಲ್ಲಿರುವ ನೊಂದಣಿ ಪತ್ರ ಹಾಗೂ 2024-25 ಮತ್ತು 2025-26 ನೇ ಸಾಲಿನಲ್ಲಿ ಸಂದಾಯ ಮಾಡಿದ ಚಲನ್ ಪ್ರತಿಗಳು.
6. ಟೆಂಡರುದಾರರು ಜಿ.ಎಸ್.ಟಿ ತೆರಿಗೆ ಕಾಯ್ದೆಯ ಅಡಿಯಲ್ಲಿ ನೊಂದಣಿ ಮಾಡಿದ ಪ್ರಮಾಣ ಪತ್ರ (ಸಂಸ್ಥೆಯ ಹೆಸರಲ್ಲಿ) ಹಾಗೂ 2024-25 ಮತ್ತು 2025-26 ನೇ ಸಾಲಿನಲ್ಲಿ ಸಂದಾಯ ಮಾಡಿದ GSTR-3B ಪ್ರತಿಗಳು.
7. 2023-24, 2024-25 ಮತ್ತು 2025-26 ನೇ ಸಾಲಿನ ಆರ್ಥಿಕ ವರ್ಷದಲ್ಲಿ ವಹಿವಾಟು ನಡೆಸಿದ ಬಗ್ಗೆ ಚಾರ್ಟಡ್ ಅಕೌಂಟೆಂಟ್‌ನಿಂದ ದೃಢೀಕರಿಸಿದ Annual Turnover ಪ್ರಮಾಣ ಪತ್ರ ಹಾಗೂ ಸದರಿ ಸಾಲಿನಲ್ಲಿ ವಾರ್ಷಿಕವಾರು ವಹಿವಾಟುಗಳ ಸಂಪೂರ್ಣ ಆಡಿಟ್ ವರದಿ (UDIN ನಂಬರ್ ಜೊತೆಯಲ್ಲಿ ಲಗತ್ತಿಸುವುದು).
8. 2023-24, 2024-25 ಮತ್ತು 2025-26 ನೇ ಸಾಲಿನ ಆರ್ಥಿಕ ವರ್ಷದಲ್ಲಿ ಆದಾಯ ತೆರಿಗೆ ಪಾವತಿಸಿರುವ ಬಗ್ಗೆ ಸಿ.ಎ ಪ್ರಮಾಣ ಪತ್ರದ ಪ್ರತಿ. (UDIN ನಂಬರ್ ಜೊತೆಯಲ್ಲಿ ಲಗತ್ತಿಸುವುದು).
9. ಪಾನ್‌ಕಾರ್ಡ್‌ನ ಪ್ರತಿ
10. ಕಳೆದ 3 ವರ್ಷಗಳಲ್ಲಿ ಹೊರ ಸಂಪನ್ಮೂಲ ಏಜೆನ್ಸಿಯಾಗಿ ವಿವಿಧ ಸರ್ಕಾರದ ಮತ್ತು ಸರ್ಕಾರೇತರ ಇಲಾಖೆಗಳಿಗೆ ಸಿಬ್ಬಂದಿಗಳ ಸೇವೆಯನ್ನು ನೀಡಿದ ವಿವರಗಳ ದೃಢೀಕೃತ ದಾಖಲೆಗಳು ಮತ್ತು ಸರಬರಾಜು ಮಾಡಿದ ಸಂಸ್ಥೆಗಳಿಂದ ತೃಪ್ತಿಕರ ಸೇವೆಯ ಬಗ್ಗೆ ದೃಢೀಕರಣ ಪತ್ರಗಳು ಹಾಗು ಟೆಂಡರ್ ಫಾರಂನಲ್ಲಿ ತೋರಿಸಿರುವ ಇತರೆ ದಾಖಲಾತಿಗಳು
11. ಮೇಲೆ ನಮೂದಿಸಿರುವ ಎಲ್ಲಾ ಮೂಲ ದಾಖಲಾತಿಗಳನ್ನು ಟೆಂಡರ್ ಆಹ್ವಾನಿಸುವ ಪ್ರಾಧಿಕಾರವು ಸೂಚಿಸುವ ದಿನಾಂಕದಂದು ಹಾಜರುಪಡಿಸಬೇಕು.

## 6. ಇ.ಎಂ.ಡಿ:-

1. **ಟೆಂಡರುದಾರರು ಪ್ರತಿ ಟೆಂಡರ್ ಜೊತೆ ರೂ.45,000/- ಇ.ಎಂ.ಡಿಯನ್ನು ಸಲ್ಲಿಸತಕ್ಕದ್ದು,**
2. ಇ.ಎಂ.ಡಿ. ಸಲ್ಲಿಸದೇ ಇರುವ ಟೆಂಡರುಗಳನ್ನು ತಿರಸ್ಕರಿಸಲಾಗುವುದು.
3. ಟೆಂಡರು ಸಲ್ಲಿಸುವ ಏಜೆನ್ಸಿ/ಟೆಂಡರ್‌ದಾರರು FDR/BG ಯ ಮೂಲ ಪ್ರತಿಯನ್ನು ಟೆಂಡರ್ ತೆರೆಯುವ ದಿನಾಂಕದಂದು ಟೆಂಡರ್ ಆಹ್ವಾನಿಸುವ ಪ್ರಾಧಿಕಾರಕ್ಕೆ ಸಲ್ಲಿಸತಕ್ಕದ್ದು.
4. ಯಶಸ್ವಿ ಬಿಡ್‌ದಾರರು ಕಾರ್ಯದೇಶ ಪಡೆದ ನಂತರ 15 ದಿನಗಳ ಅವಧಿಯಲ್ಲಿ ಕರಾರು ಮಾಡಿಕೊಳ್ಳದೇ ಇದ್ದಲ್ಲಿ (ಅಥವಾ ಕಂಟ್ರಾಕ್ಟ್ ಅವಧಿಯಲ್ಲಿ ಕಂಟ್ರಾಕ್ಟ್ ಕೆಲಸ ನಿಲ್ಲಿಸಿದಲ್ಲಿ) ಇ.ಎಂ.ಡಿ. ಮತ್ತು ಠೇವಣಿಯನ್ನು (Security deposit & Unbalanced) ಮುಟ್ಟುಗೋಲು ಹಾಕಿಕೊಳ್ಳಲಾಗುವುದು. (ಅಲ್ಲದೆ ಟೆಂಡರ್ ಷರತ್ತುಗಳನ್ನು ಉಲ್ಲಂಘನೆ ಮಾಡಿದ ಸಂದರ್ಭದಲ್ಲೂ ಸಹ ಕಾರ್ಯದೇಶ ರದ್ದುಪಡಿಸಿ ಇ.ಎಂ.ಡಿ &
5. ಠೇವಣಿ ಹಣ ಮುಟ್ಟುಗೋಲು ಹಾಕಿಕೊಳ್ಳಲಾಗುವುದು).
6. ಯಶಸ್ವಿಯಾಗದ ಟೆಂಡರುದಾರರ ಇ.ಎಂ.ಡಿ.ಯನ್ನು ಯಶಸ್ವಿ ಬಿಡ್‌ದಾರರಿಗೆ ಕಾರ್ಯದೇಶ ನೀಡಿದ ನಂತರ ಬಡ್ಡಿ ರಹಿತವಾಗಿ ಹಿಂತಿರುಗಿಸಲಾಗುವುದು.

7. **ಆರ್ಥಿಕ ಬಿಡ್‌ಗೆ ಸಲ್ಲಿಸಬೇಕಾದ ವಿವರಗಳು:–**

ಆರ್ಥಿಕ ಬಿಡ್‌ನಲ್ಲಿ ಸೇವಾ ವೆಚ್ಚವನ್ನು (Service charge)**ಶೇಕಡಾವಾರು ಪ್ರಮಾಣದಲ್ಲಿ ಸಿ.ಪಿ.ಪಿ.ಪೋರ್ಟಲ್‌ನಲ್ಲಿಯೇ** (https://eprocure.gov.in portal) ನಮೂದಿಸುವುದು.

8. **ಕಾರ್ಯಧಾರಿತ ಭದ್ರತೆ (Performance security Deposit)** :

ಯಶಸ್ವಿ ಟೆಂಡರ್‌ದಾರರು ಕಾರ್ಯಧಾರಿತ ಭದ್ರತೆಯನ್ನು ಒದಗಿಸಬೇಕು.ಈ ಮೊತ್ತವು ಟೆಂಡರ್‌ಗೆ ಇಟ್ಟ ಮೊತ್ತದ ಶೇ.5% ರಷ್ಟು ಇರುತ್ತದೆ.

- ಕಾರ್ಯಧಾರಿತ ಭದ್ರತೆಯನ್ನು FDR/BG ಯಲ್ಲಿ ಕಾರ್ಯಪಾಲಕ ಇಂಜಿನಿಯರ್, ರಾಷ್ಟ್ರೀಯ ಹೆದ್ದಾರಿ ವಿಭಾಗ, ಬೆಂಗಳೂರು ರವರ ಹೆಸರಿನಲ್ಲಿ ಸಲ್ಲಿಸತಕ್ಕದ್ದು.
- ಒಂದು ವೇಳೆ ಟೆಂಡರ್‌ದಾರರು ಅನುಮೋದಿತ ಟೆಂಡರ್ ಗಿಂತ ಕಡಿಮೆ ಮೊತ್ತ ನಮೂದಿಸಿದ್ದಲ್ಲಿ Additional Performance Security ಮೊತ್ತವನ್ನು FDR/BG ಯಲ್ಲಿ ಸಲ್ಲಿಸತಕ್ಕದ್ದು.
- ಟೆಂಡರ್ ಅಂಗೀಕೃತ ಏಜನ್ಸಿಯು ಟೆಂಡರ್ ಅಂಗೀಕೃತವಾದ LOA ನೀಡಿದ ದಿನಾಂಕದಿಂದ 7 ದಿನಗಳೊಳಗಾಗಿ ಕಾರ್ಯಧಾರಿತ ಭದ್ರತೆಯನ್ನು ಸಲ್ಲಿಸಬೇಕು.
- L1 ಟೆಂಡರ್ ದಾರರಿಗೆ ಕಾರ್ಯಾದೇಶ ನೀಡಿದ ನಂತರ ಇ.ಎಂ.ಡಿ ಮೊತ್ತವನ್ನು ಹಿಂದಿರುಗಿಸಲಾಗುವುದು.

9. **ಟೆಂಡರ್ ಸಲ್ಲಿಸುವಿಕೆ:–**

i. ಟೆಂಡರ್‌ದಾರರು ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಮೂಲಕ ದಿನಾಂಕ: **31.07.2026** ಅಪರಾಹ್ನ 4.00 ಗಂಟೆಯೊಳಗೆ ಟೆಂಡರ್ ಸಲ್ಲಿಸುವುದು.

ii. ಟೆಂಡರ್ ಸ್ವೀಕೃತಿ ದಿನಾಂಕವನ್ನು ವಿಸ್ತರಿಸುವ ಅಥವಾ ರದ್ದುಪಡಿಸುವ ಅಧಿಕಾರವನ್ನು ಟೆಂಡರ್ ಆಹ್ವಾನಿಸುವ ಪ್ರಾಧಿಕಾರ ಹೊಂದಿರುತ್ತದೆ.

10. **ಟೆಂಡರ್ ಅವಾರ್ಡ್ ಮಾಡುವುದು** :–

1) ಆರ್ಥಿಕ ಬಿಡ್‌ನಲ್ಲಿ ಹೇಳಿರುವ ಅಂಶದ ಮೇಲೆ ಅತೀ ಕಡಿಮೆ ದರ ನಮೂದಿಸಿದ ಟೆಂಡರುದಾರರನ್ನು ಯಶಸ್ವಿ ಟೆಂಡರ್‌ದಾರರೆಂದು ಪರಿಗಣಿಸಿ ಅವರಿಗೆ ಕಾರ್ಯದೇಶ ನೀಡಲಾಗುವುದು. ಅವಶ್ಯವಿದ್ದಲ್ಲಿ L1 ಟೆಂಡರ್‌ದಾರರೊಡನೆ ದರ ಸಂಧಾನ ನಡೆಸಲು ಟೆಂಡರ್ ಕರೆದಿರುವ ಪ್ರಾಧಿಕಾರಕ್ಕೆ ಅಧಿಕಾರವಿರುತ್ತದೆ.
2) ಟೆಂಡರ್‌ಗಳ ಆರ್ಥಿಕ ಬಿಡ್ ತೆರೆದ ನಂತರ ಒಪ್ಪುವ ಅಥವಾ ತಿರಸ್ಕರಿಸುವ ಅಧಿಕಾರ ಟೆಂಡರ್ ಕರೆದಿರುವ ಪ್ರಾಧಿಕಾರ ಹೊಂದಿರುತ್ತದೆ.
3) ಟೆಂಡರ್ ಅವಧಿಯು ದಿನಾಂಕ: 01.08.2026 ರಿಂದ 31.07.2027 ರವರೆಗೆ ಸಿಬ್ಬಂದಿಗಳ ಸೇವೆ ನೀಡಬೇಕು.
4) ಟೆಂಡರ್ ಕರೆದ 90 (90+45) ದಿನಗಳಲ್ಲಿ ಕಾರ್ಯದೇಶ ನೀಡದಿದ್ದಲ್ಲಿ ಅಥವಾ ಒಂದು ವೇಳೆ ಟೆಂಡರುದಾರರು ಲಿಖಿತ ಒಪ್ಪಿಗೆ ನೀಡಿದುದರ ಮೇರೆಗೆ ವಿಸ್ತರಿಸಿದ ಅವಧಿಯಲ್ಲಿ ಕಾರ್ಯದೇಶ ನೀಡದಿದ್ದಲ್ಲಿ ತಂತಾನೆ ಟೆಂಡರ್ ರದ್ದಾಗುತ್ತದೆ.

11. **ಟೆಂಡರ್ ಗುತ್ತಿಗೆಯ ಕರಾರು ಒಪ್ಪಂದವನ್ನು ಸಹಿ ಮಾಡುವುದು:–**

ಯಶಸ್ವಿ ಟೆಂಡರ್‌ದಾರರಿಗೆ Letter Of Acceptance(LOA) ನೀಡಲಾಗುವುದು. LOA ಪಡೆದ ನಂತರ, ಯಶಸ್ವಿ ಟೆಂಡರ್‌ದಾರರು ಭದ್ರತಾ ಠೇವಣಿ ಸಲ್ಲಿಸಬೇಕು ನಂತರ ಸಂಬಂಧಿಸಿದ ಬ್ಯಾಂಕ್ ನಿಂದ ಧೃಢೀಕರಣ ಪಡೆದುಕೊಂಡು ಗುತ್ತಿಗೆದಾರರೊಂದಿಗೆ ಕರಾರು ಒಪ್ಪಂದ ಮಾಡಿಕೊಳ್ಳುವುದು.

**ಟೆಂಡರ್‌ದಾರರಿಗೆ ಸೂಚನೆಗಳು:–**

**ಟೆಂಡರ್‌ದಾರರಿಗೆ ಇರಬೇಕಾದ ಅರ್ಹತೆಗಳು:–** ಟೆಂಡರುದಾರರು ಮಾನವ ಹೊರಸಂಪನ್ಮೂಲ ಸೇವೆಯನ್ನು ಒದಗಿಸುವ ಸಂಬಂಧ ಈ ಕೆಳಕಂಡ ಕಾಯ್ದೆಗಳ ಪ್ರಕಾರ ಕಡ್ಡಾಯವಾಗಿ ಕನಿಷ್ಠ 3 ವರ್ಷಗಳ ಹಿಂದೆ ನೊಂದಣಿ ಮಾಡಿರಬೇಕು.

1) ಕರ್ನಾಟಕ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳ ನೋಂದಣಿ ಕಾಯ್ದೆ 1961ರಡಿ
2) ಕಾರ್ಮಿಕ ಭವಿಷ್ಯ ನಿಧಿ(ಇ.ಪಿ.ಎಫ್) ಕಾಯ್ದೆ
3) ರಾಜ್ಯ ಕಾರ್ಮಿಕ ವಿಮಾ (ಇ.ಎಸ್.ಐ) ಕಾಯ್ದೆ
4) ಆದಾಯ ತೆರಿಗೆ ಕಾಯ್ದೆಯಡಿ ಪಾನ್ ಕಾರ್ಡ್ ಹೊಂದಿರಬೇಕು.
5) GST ತೆರಿಗೆ ಕಾಯ್ದೆ
6) ವೃತ್ತಿ ತೆರಿಗೆ ನೋಂದಣಿ
7) ಹೊರಸಂಪನ್ಮೂಲ ಏಜೆನ್ಸಿಯಾಗಿ ಈ ಹಿಂದೆ ಮಾನವ ಸಂಪನ್ಮೂಲ ಸೇವೆಯನ್ನು ವಿವಿಧ ಸರ್ಕಾರಿ ಮತ್ತು ಅರೆ ಸರ್ಕಾರಿ ಇಲಾಖೆಗಳಿಗೆ ನೀಡಿರುವ ವಿವರ ಮತ್ತು ದೃಢೀಕೃತ ದಾಖಲೆಗಳನ್ನು ಸಲ್ಲಿಸಬೇಕು.
8) ಟೆಂಡರ್‌ದಾರರು ಮಾನವ ಹೊರಸಂಪನ್ಮೂಲ ಏಜೆನ್ಸಿಯಾಗಿ ಸಿಬ್ಬಂದಿ ಸೇವೆ ನೀಡಿರುವ ಬಗ್ಗೆ ಕನಿಷ್ಠ 3 ವರ್ಷಗಳ ಅನುಭವ ಪಡೆದಿರಬೇಕು.
9) ಕಳೆದ ಮೂರು ವರ್ಷಗಳಲ್ಲಿ ಟೆಂಡರ್‌ದಾರರು ಮಾನವ ಸಂಪನ್ಮೂಲ ಸೇವೆ ಒದಗಿಸಿದ ಸಂಬಂಧ ವಾರ್ಷಿಕ ವಹಿವಾಟುಗಳ ವಿವರಗಳು 2023–24, 2024–25 ಮತ್ತು 2025–26 (ಪ್ರತಿಯೊಂದು ವರ್ಷದಲ್ಲಿ ಕನಿಷ್ಠ **35.00 ಲಕ್ಷ ಹಾಗೂ ಮೇಲ್ಪಟ್ಟು ನಿರ್ವಹಿಸಿರಬೇಕು**) ಸಿ.ಎ. ಆಡಿಟ್ ವರದಿಯ(ಪ್ರತಿ ಲಗತ್ತಿಸುವುದು)
10) ಉದ್ಯಮಿ ಪರವಾನಿಗೆ ನೊಂದಣಿ ಹೊಂದಿರಬೇಕು.
11) ಮೇಲ್ಕಂಡ ಎಲ್ಲಾ ಕಾಯ್ದೆಗಳಲ್ಲಿ ನೊಂದಣಿ ಮಾಡಿದ ಬಗ್ಗೆ ನೊಂದಣಿ ಪ್ರಮಾಣ ಪತ್ರಗಳನ್ನು ದೃಢೀಕರಿಸಿದ ಪ್ರತಿಗಳನ್ನು ಸಲ್ಲಿಸಬೇಕು. ಈ ಮೇಲಿನ ಸೂಕ್ತ ಅರ್ಹತೆಗಳು ಇಲ್ಲದಿದ್ದಲ್ಲಿ ಟೆಂಡರ್‌ನ್ನು ತಿರಸ್ಕರಿಸಲಾಗುವುದು.
12) ಪೊಲೀಸ್ ಇಲಾಖೆಯಲ್ಲಿ ನೋಂದಣಿಗೊಂಡ ಬಗ್ಗೆ ದೃಢೀಕರಣ ನೀಡುವುದು.

## 12. **ಷರತ್ತುಗಳು:**

**1) ಟೆಂಡರುದಾರರ ಜವಾಬ್ದಾರಿಗಳು:–**

1) ಗುತ್ತಿಗೆದಾರರು ಹೆಚ್ಚು ಅನುಭವವುಳ್ಳ ಸೇವಾ ಸಿಬ್ಬಂದಿಯನ್ನು ಇಲಾಖೆಗೆ ನೀಡಬೇಕು.ಈ ರೀತಿ ನೇಮಕಗೊಂಡ ಹೊರಸಂಪನ್ಮೂಲ ಸಿಬ್ಬಂದಿಯು ಹಿರಿಯ ಇಲಾಖಾ ಅಧಿಕಾರಿಗಳ ವ್ಯಾಪ್ತಿಯಲ್ಲಿ ಅವರ ಮಾರ್ಗದರ್ಶನದಂತೆ ಸೇವೆ ಸಲ್ಲಿಸುವಂತಿರಬೇಕು.
2) ಯಾವುದೇ ಕಾರಣಕ್ಕೂ ಇಲಾಖಾ ಅಧಿಕಾರಿಗಳ ಗಮನಕ್ಕೆ ತರದೆ ಏಜೆನ್ಸಿಯು ತನ್ನ ಸಿಬ್ಬಂದಿಗಳನ್ನು ಹಿಂಪಡೆಯಬಾರದು ಈ ರೀತಿ ಮಾಡಿದ್ದಲ್ಲಿ ಇದನ್ನು ಟೆಂಡರ್ ಷರತ್ತುಗಳ ಉಲ್ಲಂಘನೆ ಎಂದು ಪರಿಗಣಿಸಲಾಗುವುದು.
3) ಟೆಂಡರುದಾರರು/ಗುತ್ತಿಗೆದಾರರು ನಿಯೋಜಿಸುವ ಸಿಬ್ಬಂದಿವರ್ಗದವರು ಅನ್ವಯಿಸುವ ಕಾರ್ಮಿಕ ಕಾಯಿದೆಯನ್ವಯ ರಜೆಯನ್ನು ಪಡೆಯಲು ಹಕ್ಕು ಹೊಂದಿರುತ್ತಾರೆ. ಹಕ್ಕಿನ ಬಾಬ್ತು ಸಿಬ್ಬಂದಿಗಳು 15 ದಿನಕ್ಕೂ ಹೆಚ್ಚಿನ ದಿನ ರಜೆಯ ಮೇಲೆ ತೆರಳಿದಾಗ ಗುತ್ತಿಗೆದಾರರು ಬದಲಿ ವ್ಯವಸ್ಥೆಯನ್ನು ಮಾಡತಕ್ಕದು. ಅಂತಹ ವ್ಯವಸ್ಥೆಯನ್ನು ಮಾಡಲು ಗುತ್ತಿಗೆದಾರರು ವಿಫಲರಾದಲ್ಲಿ ಅಂತಹ ಸಿಬ್ಬಂಧಿಗಳ ವೇತನ ಬಿಲ್ಲು ಸಲ್ಲಿಸುವಾಗ ಸದರಿ ದಿನಗಳ ವೇತನವನ್ನು ಕ್ಲೈಮ್ ಮಾಡಬಾರದು.
4) ಟೆಂಡರ್‌ದಾರರು/ಗುತ್ತಿಗೆದಾರರು ನೀಡುವ ಸಿಬ್ಬಂದಿಗಳಿಗೆ ಸೇವಾ ಅವಧಿಯಲ್ಲಿ ಪ್ರಾಣಪಾಯ ಆಕಸ್ಮಿಕ ಘಟನೆಗಳು ಸಂಭವಿಸಿದ್ದಲ್ಲಿ ಅದಕ್ಕೆ ಟೆಂಡರ್‌ದಾರರೇ/ಗುತ್ತಿಗೆದಾರರೇ ಸೂಕ್ತ ಹೊಣೆಗಾರರಾಗಿದ್ದು, ವರ್ಕ್‌ಮನ್ಸ್ ಕಾಂಪನ್ಸೇಷನ್ ಆಕ್ಟ್ 1923 ರ ಪ್ರಕಾರ ಅವರಿಗೆ ಸಂದಾಯ ಮಾಡಬೇಕಾದ ಪರಿಹಾರಕ್ಕೆ

ಸಂಬಂಧಪಟ್ಟ ಟೆಂಡರ್‌ದಾರರೇ ಜವಾಬ್ದಾರರಾಗಿರುತ್ತಾರೆ. ಇಲಾಖೆಯು ಈ ಬಗ್ಗೆ ಯಾವುದೇ ಜವಾಬ್ದಾರಿ ಹೊಂದಿರುವುದಿಲ್ಲ.

5) ಟೆಂಡರ್‌ದಾರರು/ಗುತ್ತಿಗೆದಾರರುನಿಯೋಜಿಸುವ ಸಿಬ್ಬಂದಿಗಳು ಇಲಾಖೆಗೆ ನಷ್ಟ ಉಂಟು ಮಾಡಿದ್ದಲ್ಲಿ ಅದನ್ನು ಟೆಂಡರ್‌ದಾರರೇ/ಗುತ್ತಿಗೆದಾರರೇ ಭರಿಸಬೇಕಾಗುತ್ತದೆ.

6) ಗುತ್ತಿಗೆ ಅವಧಿಯಲ್ಲಿ ಮುಂಗಡವನ್ನು ಮಂಜೂರು ಮಾಡುವುದಿಲ್ಲ ಹಾಗೂ ಅಂಗೀಕೃತವಾದ ಸೇವಾ ವೆಚ್ಚದ ದರಕ್ಕಿಂತ ಹೆಚ್ಚುವರಿ ದರಕ್ಕೆ ಗುತ್ತಿಗೆದಾರರಿಂದ ಯಾವುದೇ ಮನವಿ ಪತ್ರವನ್ನು ಪರಿಗಣಿಸಲಾಗುವುದಿಲ್ಲ.

7) ಟೆಂಡರ್‌ದಾರರು/ಗುತ್ತಿಗೆದಾರರು ನಿಯೋಜಿಸುವ ಸಿಬ್ಬಂದಿಗಳು ಉತ್ತಮ ನಡತೆ ಹೊಂದಿರತಕ್ಕದ್ದು.. ಕೆಲಸದ ಸಮಯದಲ್ಲಿ ಸಿಬ್ಬಂದಿಗಳು ಪಾನಮತ್ತರಾಗಿರುವುದು, ಭಂಗಿ, ಚುಟ್ಟ ಸಿಗರೇಟು ಸೇದುವುದನ್ನು ಮತ್ತು ಅಮಲು ಪದಾರ್ಥಗಳನ್ನು ಸೇವಿಸುವುದನ್ನು ನಿಷೇದಿಸಿದೆ ಮತ್ತು ಅಂತಹ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಿ ಗುತ್ತಿಗೆದಾರರನ್ನು ಹೊಣೆಗಾರರನ್ನಾಗಿ ಮಾಡಲಾಗುವುದು ಮತ್ತು ಗುತ್ತಿಗೆದಾರರು ಅಂತಹ ಸಿಬ್ಬಂದಿಗಳ ವಿರುದ್ಧ ತಕ್ಕ ಶಿಸ್ತು ಕ್ರಮವನ್ನು ತೆಗೆದುಕೊಳ್ಳಲು ಬದ್ದರಾಗಿರತಕ್ಕದು.

8) ಯಶಸ್ವಿ ಬಿಡ್‌ದಾರರು ಕಾರ್ಯದೇಶ ಪಡೆದ ನಂತರ ಕಂಟ್ರಾಕ್ಟ್ ಅವಧಿಯಲ್ಲಿ ಕಂಟ್ರಾಕ್ಟ್ ಕೆಲಸ ನಿಲ್ಲಿಸಿದಲ್ಲಿ ಹಾಗೂ ಟೆಂಡರ್ ಷರತ್ತುಗಳನ್ನು ಉಲ್ಲಂಘನೆ ಮಾಡಿದ ಸಂದರ್ಭದಲ್ಲಿ ಕಾರ್ಯದೇಶ ರದ್ದುಪಡಿಸಿ ಇ.ಎಂ.ಡಿ/ಕಾರ್ಯಧಾರಿತ ಭದ್ರತೆ (Performance security Deposit) ನೀಡಿರುವ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

2) **ಸಿಬ್ಬಂದಿ ವೇತನದ ಜವಾಬ್ದಾರಿ:–**

1) ಇಲಾಖೆಯು ವಿವಿಧ ವರ್ಗದ ಸಿಬ್ಬಂದಿಗಳಿಗೆ ನೀಡುವ ವೇತನ, ಇ.ಎಸ್.ಐ ಮತ್ತು ಇ.ಪಿ.ಎಫ್ ಕಡಿತಗಳು, ಸೇವಾ ತೆರಿಗೆ ಕಡಿತಗಳ ವಿವರಗಳನ್ನು ಯಶಸ್ವಿ ಟೆಂಡರ್‌ದಾರರಿಗೆ/ಗುತ್ತಿಗೆದಾರರಿಗೆ ನೀಡಲಾಗುವುದು. ಈ ಟೆಂಡರು ದಾಖಲೆಗಳ ಅನುಬಂಧದಲ್ಲಿ ನೀಡಲಾಗಿದೆ. ಅದರಂತೆ ಪ್ರತಿ ಸಿಬ್ಬಂದಿಗೆ ಅವರ ಹುದ್ದೆಯ ಹೆಸರಿನ ಮುಂದೆ ತೋರಿಸಿರುವ ವಿವರಗಳಂತೆ ಮನೆಗೆ ತೆಗೆದುಕೊಂಡು ಹೋಗುವ ವೇತನ (Take Home salary) ವನ್ನು ಆಯಾ ಹುದ್ದೆಗಳನುಸಾರ ಸಂಬಂಧಪಟ್ಟ ಸಿಬ್ಬಂದಿಗಳಿಗೆ ಪ್ರತಿ **ತಿಂಗಳ 5ನೇ ತಾರೀಖಿನೊಳಗೆ** ಕಡ್ಡಾಯವಾಗಿ RTGS ಮೂಲಕ ವೇತನವನ್ನು ಟೆಂಡರ್‌ದಾರರು/ಗುತ್ತಿಗೆದಾರರು ಸಿಬ್ಬಂದಿಯ ಖಾತೆಗೆ ವರ್ಗಾಯಿಸುವುದು. **ಬಿಲ್ಲಿನೊಂದಿಗೆ** RTGS ಮೂಲಕ ವೇತನ ಪಾವತಿ ಮಾಡಿದ ಕುರಿತು **ಬ್ಯಾಂಕ್ ದಾಖಲೆ ಸಲ್ಲಿಸುವುದು.**

2) ಸಿಬ್ಬಂದಿಯ ವೇತನದ ಇತರೆ ಕಡಿತಗಳನ್ನು ಟೆಂಡರುದಾರರು/ಗುತ್ತಿಗೆದಾರರು ಪೂರ್ವಭಾವಿಯಾಗಿ ತಮ್ಮ ಸ್ವಂತ ಹಣದಿಂದ ಭರಿಸಿ ಆ ಕೆಲಸದ ತಿಂಗಳು ಮುಗಿದ ನಂತರ ಇಲಾಖೆಗೆ ಬಿಲ್ ಸಲ್ಲಿಸುವ ಮುಖಾಂತರ ಹಣದ ಮರುಪಾವತಿ ಪಡೆಯತಕ್ಕದ್ದು.

3) ಸಿಬ್ಬಂದಿಯ ವೇತನದಲ್ಲಿ ನೌಕರನ ವಂತಿಕೆಯಿಂದ ಇ.ಪಿ.ಎಫ್. 13%, ಇ.ಎಸ್.ಐ 3.25% ಮತ್ತು ವೃತ್ತಿಪರ ತೆರಿಗೆಗಳನ್ನು (ಅನ್ವಯಿಸುತ್ತಿದ್ದಲ್ಲಿ) ಮಾತ್ರ ಕಡಿತಗೊಳಿಸತಕ್ಕದ್ದು. ಮಾಸಿಕ ರೂ.15,000.00 ಕ್ಕಿಂತ ಹೆಚ್ಚು ವೇತನ ಪಡೆಯುವವರಿಗೆ ಇ.ಪಿ.ಎಫ್. ಕಡ್ಡಾಯವಲ್ಲ.

4) ಪ್ರತಿಯೊಬ್ಬ ಸಿಬ್ಬಂದಿಯನ್ನು ಇ.ಪಿ.ಎಫ್ ಸಂಘಟನೆಯಲ್ಲಿ ನೋಂದಣಿ ಮಾಡಿಸಿ ಅವರ ಹೆಸರಿನಲ್ಲಿ ಸದಸ್ಯತ್ವದ ಸಂಖ್ಯೆ ಮತ್ತು ಗುರುತಿನ ಚೀಟಿಯನ್ನು ಹಾಗೂ ಇ.ಎಸ್.ಐ ಕಾರ್ಪೋರೇಶನ್ ನಲ್ಲಿ. ಸಿಬ್ಬಂದಿಯನ್ನು ನೋಂದಣಿ ಮಾಡಿಸಿ ಅವರ ಹೆಸರಿನಲ್ಲಿ ಐ.ಪಿ (ಇನ್ಸುರ್ಡ್ ಪರ್ಸನ್) ಕಾರ್ಡ್ ಮತ್ತು ಸಂಖ್ಯೆಯನ್ನು ನೇಮಕವಾದ ಎರಡು ತಿಂಗಳೊಳಗೆ ಪಡೆದು ಗುತ್ತಿಗೆದಾರರು ನೀಡತಕ್ಕದು ಸದರಿ ಸಿಬ್ಬಂದಿಗಳ ನೊಂದಣಿ ಸಂಖ್ಯೆ ಮತ್ತು ಹೆಸರಿನಲ್ಲಿ ಸಿಬ್ಬಂದಿ ಪಾಲಿನ ವಂತಿಕೆ ಹಾಗೂ ಎಂಪ್ಲಾಯರ್ಸ್ ಭಾಗದ ವಂತಿಕೆಯನ್ನು ಸೇರಿಸಿ (12% +12%) ಹಾಗೂ ಪಿ.ಎಫ್ ಸಂಘಟನೆಗೆ ಪಾವತಿಸಬೇಕಾದ 1.36% ಸೇರಿಸಿ ಒಟ್ಟು ಮೊಬಲಗನ್ನು ಕಾಯಿದೆಯಡಿ ನಿಗಧಿಪಡಿಸಿದ ನಿಗಧಿತ ದಿನಾಂಕದೊಳಗೆ ಪ್ರತಿ ತಿಂಗಳು ಟೆಂಡರುದಾರರು ತಪ್ಪದೇ ಇ.ಪಿ.ಎಫ್ ಸಂಘಟನೆಗೆ ಜಮಾ ಮಾಡಬೇಕು.

5) ಸದರಿ ಸಿಬ್ಬಂದಿಗಳ ನೊಂದಣಿ ಸಂಖ್ಯೆ ಮತ್ತು ಹೆಸರಿನಲ್ಲಿ ಸಿಬ್ಬಂದಿ ಪಾಲಿನ ವಂತಿಕೆಗೆ ಎಂಪ್ಲಾಯರ್ಸ್ ಭಾಗದ ವಂತಿಕೆಯನ್ನು ಸೇರಿಸಿ (13%+3.25%) ಒಟ್ಟು ಮೊಬಲಗನ್ನು ಕಾಯಿದೆಯಡಿ ನಿಗಧಿಪಡಿಸಿದ

ನಿಗಧಿತ ದಿನಾಂಕದೊಳಗೆ ಪ್ರತಿ ತಿಂಗಳು ಟೆಂಡರುದಾರರು/ಗುತ್ತಿಗೆದಾರರು ತಪ್ಪದೇ ಇ.ಎಸ್.ಐ ಕಾರ್ಪೊರೇಶನ್‌ಗೆ ಜಮಾ ಮಾಡಬೇಕು.

6) ಈ ರೀತಿ ಸಿಬ್ಬಂದಿಯ ವೈಯಕ್ತಿಕ ಹೆಸರಿಗೆ ಮತು ನೋಂದಣಿ ಸಂಖ್ಯೆಗೆ ಜಮಾ ಮಾಡಿದ ಹಣದ ಬಗ್ಗೆ ಸಂಘಟನೆ ಮತ್ತು ಕಾರ್ಪೊರೇಶನ್ ನೀಡುವ ರಶೀದಿ/ಚಲನ್‌ಗಳನ್ನು ಅದರ ಮುಂದಿನ ತಿಂಗಳು ಇಲಾಖೆಯಿಂದ ಹಣ ಪಾವತಿ ಪಡೆಯಲು ಸಲ್ಲಿಸುವ ಬಿಲ್ಲಿನೊಂದಿಗೆ ತಪ್ಪದೇ ವಿವರಗಳನ್ನು ಈ ಕಛೇರಿಗೆ ನೀಡಬೇಕು.

7) ಈ ಟೆಂಡರ್‌ದಾರರು ಆಯಾ ತಿಂಗಳು ಇ.ಪಿ.ಎಫ್. ಇ.ಎಸ್.ಐ ಮತ್ತು ಸೇವಾ ತೆರಿಗೆಗಳನ್ನು ಪಾವತಿಸಿದ ಬಗ್ಗೆ ನಿಗಧಿತ ದಾಖಲೆಗಳನ್ನು ಸಲ್ಲಿಸಿ ಹಿಂದಿನ ತಿಂಗಳ ಹಣವನ್ನು ಮರುಪಾವತಿಯಾಗಿ ಪಡೆಯತಕ್ಕದ್ದು.

8) ಟೆಂಡರ್‌ದಾರರು ಕನಿಷ್ಟ 2 ತಿಂಗಳ ಅವಧಿಯಲ್ಲಿ **ಪ್ರತಿಯೊಬ್ಬ ಸಿಬ್ಬಂದಿಯ ಇ.ಎಸ್.ಐ. ಮತ್ತು ಇ.ಪಿ.ಎಫ್. ನೋಂದಣಿ ಮಾಡಿಸಿ ಸಂಖ್ಯೆಗಳನ್ನು ಸಿಬ್ಬಂದಿಗಳಿಗೆ ನೀಡದಿದ್ದಲ್ಲಿ ಇದು ಟೆಂಡರ್ ನಿಬಂಧನೆಯ ಉಲ್ಲಂಘನೆ ಎಂದು ಪರಿಗಣಿಸಿ ಟೆಂಡರನ್ನು ರದ್ದು ಮಾಡಲಾಗುವುದು** ಮತ್ತು ನೋಂದಣಿಯಾಗದ ಅವಧಿಯಲ್ಲಿ ಯಾವುದೇ ನೌಕರರ ವಂತಿಕೆ ಕಡಿತಗಳನ್ನು ಟೆಂಡರ್‌ದಾರರು/ಗುತ್ತಿಗೆದಾರರು ಕಟಾವು ಮಾಡಬಾರದು ಮತ್ತು ಈ ಸಂಬಂಧ ಹಣವನ್ನು ನೌಕರರಿಗೆ ವೇತನದಲ್ಲಿ ಸೇರಿಸಿ ನೀಡಬೇಕು. ವೈಯಕ್ತಿಕ ಖಾತೆಗಳನ್ನು ತೆರೆಯುವ ತನಕ ಇಲಾಖೆಯು ಸಹ ತನ್ನ ವಂತಿಕೆಯನ್ನು ಟೆಂಡರ್‌ದಾರರಿಗೆ/ಗುತ್ತಿಗೆದಾರರಿಗೆ ನೀಡುವುದಿಲ್ಲ.

9) ಒಂದೇ ತೆರನಾದ ಹುದ್ದೆಯಲ್ಲಿ ಪುರುಷ ಮತ್ತು ಮಹಿಳಾ ಕಾರ್ಮಿಕರು ನೇಮಕಗೊಂಡಲ್ಲಿ ಸದರಿ ಹುದ್ದೆಗೆ ನಿಗಧಿಯಾದ ವೇತನವನ್ನು ಪುರುಷ ಮತ್ತು ಮಹಿಳಾ ಕಾರ್ಮಿಕರಿಗೆ ಸಮಾನ ವೇತನವನ್ನು ಪಾವತಿಸತಕ್ಕದು.

3) **<u>ಸಿಬ್ಬಂದಿ ವೇತನದಲ್ಲಿ ಕಡಿತಗೊಸಬಹುದಾದ ಬಾಬ್ತುಗಳು</u>:–**

1) **<u>ಕಾರ್ಮಿಕ ಭವಿಷ್ಯ ನಿಧಿ (E.P.F)</u>:–** ಒಬ್ಬ ನೌಕರನ ಮೂಲ ವೇತನ ಹಾಗೂ ದಿನಭತ್ಯೆ ಸೇರಿ ರೂ.15,000.00ಗಳಿಗಿಂತ ಹೆಚ್ಚು ವೇತನ ಪಡೆಯುತ್ತಿದ್ದಲ್ಲಿ ಇ.ಪಿ.ಎಫ್ ವಂತಿಕೆ ಕಡ್ಡಾಯವಿರುವುದಿಲ್ಲ. ಆದ್ದರಿಂದ ಅಂತಹ ನೌಕರನ ಇ.ಪಿ.ಎಫ್ ವಂತಿಕೆಯನ್ನು ಕಡಿತಗೊಳಿಸಬಾರದು. ರೂ.15000.00 ಗಳಿಗಿಂತ ಕಡಿಮೆ ವೇತನ ಪಡೆಯುತ್ತಿದ್ದಲ್ಲಿ ನೌಕರನ ಬಾಬ್ತು ಒಟ್ಟು 12.% ಇ.ಪಿ.ಎಫ್ ಕಡಿತ ಮಾಡಬೇಕು. ಇದನ್ನು ನೌಕರನಿಗೆ ನೀಡುವ ಮೂಲವೇತನ ಮತ್ತು ಎರಿಳಿತದ ತುಟ್ಟಿಭತ್ಯೆಯಲ್ಲಿ ಒಟ್ಟಾಗಿ ಕಡಿತಗೊಳಿಸಬೇಕು. ಅದಕ್ಕೆ ಸಮನಾಂತರ ವಂತಿಕೆಯಾದ ಮಾಲೀಕರ ವಂತಿಕೆಯನ್ನು 12% ಮತ್ತು ಇಡಿಎಲ್‌ಐ ಮತ್ತು ಆಡಳಿತ ವೆಚ್ಚ ಸೇರಿ 1.00% ಸೇರಿ ಒಟ್ಟು 13.00% ಗಳನ್ನು ಇಲಾಖೆಯಿಂದ ಪಡೆದು ಸಿಬ್ಬಂದಿ ವೇತನದಿಂದ ಕಟಾವು ಮಾಡಿದ ನೌಕರರ ವಂತಿಗೆ 12% ಮತ್ತು ಎಂಪ್ಲಾಯರ್ಸ್ ವಂತಿಗೆಯನ್ನು 12% ಅನ್ನು ಪಾವತಿಸಿ ಹಾಗೂ 01.00% ಅನ್ನು ಸಂಘಟನೆಗೆ ಪಾವತಿಸಿ ಪ್ರತಿ ನೌಕರನಿಗೆ ಇ.ಪಿ.ಎಫ್ ಮತ್ತು ಇ.ಎಸ್.ಐ ಸಂಬಂಧ ಅನುಬಂಧದಲ್ಲಿರುವಂತೆ ಮತ್ತು ಕಾರ್ಮಿಕ ಕಾಯಿದೆಯಡಿ ನಿರ್ವಹಿಸಬೇಕಾದ ಎಲ್ಲಾ ದಾಖಲೆಗಳನ್ನು ಗುತ್ತಿಗೆದಾರರೇ ನಿರ್ವಹಿಸಿ ಕಾಲಕಾಲಕ್ಕೆ ಕಾರ್ಮಿಕ/ಇ.ಪಿ.ಎಫ್/ಇ.ಎಸ್.ಐ ಇಲಾಖೆಗೆ ಸಲ್ಲಿಸಿ ಪರಿಶೀಲನೆಗೆ ಒಳಪಡಿಸಿಕೊಂಡು ಇಲಾಖೆಯಿಂದ ದೃಢೀಕರಣ ಪಡೆದು ಹಾಜರುಪಡಿಸಬೇಕು. ಹಾಜರುಪಡಿಸಲು ವಿಫಲರಾದ ಪಕ್ಷದಲ್ಲಿ ಇದು ಟೆಂಡರ್ ನಿಬಂಧನೆಯ ಉಲ್ಲಂಘನೆ ಎಂದು ಪರಿಗಣಿಸಿ ಟೆಂಡರನ್ನು ರದ್ದು ಮಾಡಲಾಗುವುದು.

2) <u>ರಾಜ್ಯ ಕಾರ್ಮಿಕ ವಿಮೆ</u>:– (E S I):– ಇ.ಎಸ್.ಐ ಕಾಯಿದೆ, 1948 ರಡಿ ವೇತನದ ವ್ಯಾಖ್ಯಾನಕ್ಕೆ ಬರುವ ವೇತನಕ್ಕೆ ಸರಿಯಾಗಿ ಪ್ರತಿ ನೌಕರನ ಒಟ್ಟು ವೇತನ ರೂ.21,000/– ಗಳಿಗಿಂತ ವೇತನ ಕಡಿಮೆ ಇದ್ದಲ್ಲಿ ಈ ಇ.ಎಸ್.ಐ ವಂತಿಗೆಯನ್ನು ಕಟಾವು ಮಾಡಬೇಕು. ಒಂದು ವೇಳೆ ರೂ.21000.00 ಕ್ಕಿಂತ ವೇತನ ಹೆಚ್ಚು ಪಡೆಯುತ್ತಿದ್ದಲ್ಲಿ ಕಟಾವು ಮಾಡುವುದು ಕಡ್ಡಾಯವಲ್ಲ. ಈ ರೀತಿ ರೂ. 21,000.00 ಗಳಿಗಿಂತ ಕಡಿಮೆ ವೇತನ ಪಡೆಯುವ ನೌಕರರಿಂದ ಕಾರ್ಮಿಕರ ವಂತಿಕೆಯನ್ನು 0.75% ದರದಲ್ಲಿ ಕಡಿತಗೊಳಿಸಬೇಕು. ಇದಕ್ಕೆ ಮಾಲೀಕರ ವಂತಿಗೆ 3.25% ಸೇರಿಸಿ. ಇ.ಎಸ್.ಐ ಇಲಾಖೆಯಲ್ಲಿ ಪ್ರತಿ ನೌಕರನ ನೋಂದಣಿ ಸಂಖ್ಯೆಗೆ ಟೆಂಡರ್‌ದಾರರು ಜಮಾ ಮಾಡಬೇಕು. ಇಲ್ಲವಾದಲ್ಲಿ ಈ ವಂತಿಕೆಯನ್ನು ಕಟಾವು ಮಾಡಬಾರದು. ಒಂದು ವೇಳೆ ಕಡಿತಗಳನ್ನು ಕಟಾವು ಮಾಡಿ ಸಂಬಂಧಪಟ್ಟ ಇಲಾಖೆಗಳಿಗೆ ಜಮಾಮಾಡದಿದ್ದಲ್ಲಿ ಇದು ಟೆಂಡರ್ ಉಲ್ಲಂಘನೆ ಎಂದು ಪರಿಗಣಿಸಲಾಗುವುದು.

3) <u>ವೃತ್ತಿ ತೆರಿಗೆ (Professional Tax)</u>:– ರೂ.25,000/– ಗಳಿಗಿಂತ ಹೆಚ್ಚು ವೇತನ ಪಡೆಯುವ ನೌಕರರಿಗೆ ರೂ.200/– ಗಳನ್ನು ಕಡಿತಗೊಳಿಸಿ ಸರ್ಕಾರಕ್ಕೆ ಜಮಾ ಮಾಡುವುದು ಈ ಬಗ್ಗೆ ಎಲ್ಲಾ ದಾಖಲೆಗಳನ್ನು ನಿರ್ವಹಿಸಬೇಕು.

4) <u>GSTತೆರಿಗೆ (GST/Service Tax)</u>:– ಟೆಂಡರುದಾರರು/ಗುತ್ತಿಗೆದಾರರು ಮಾನವ ಹೊರ ಸಂಪನ್ಮೂಲ ಸೇವೆಯನ್ನು ಒದಗಿಸುವ ಸಂಬಂಧ ಒಟ್ಟು ವೇತನಕ್ಕೆ (ಮೂಲವೇತನ + ಇ.ಎಸ್.ಐ + ಪಿಎಫ್ ಸೇರಿ) 18% ರಷ್ಟು GSTತೆರಿಗೆಯನ್ನು ಸರ್ಕಾರಕ್ಕೆ ಪಾವತಿಸಬೇಕಾಗುತ್ತದೆ.

5) **ಯಾವುದೇ ಹೆಚ್ಚಿನ ತೆರಿಗೆ ಸರಕಾರವು ವಿಧಿಸಿದಲ್ಲಿ ಅದನ್ನು ಟೆಂಡರ್ ದಾರರು ಪಾವತಿಸಲು ಬದ್ದರಾಗಿರಬೇಕು.**

**4) <u>ಇತರೆ ನಿಬಂಧನೆಗಳು:</u>**

a) ಟೆಂಡರ್‌ದಾರರು/ಗುತ್ತಿಗೆದಾರರು ಕಾರ್ಮಿಕ ಇಲಾಖೆಯ ಆಯುಕ್ತರಿಂದ ಗುತ್ತಿಗೆ ಪರವಾನಗಿಯನ್ನು ಪಡೆದುಕೊಂಡು ಗುತ್ತಿಗೆ ಕಾರ್ಮಿಕ (ನಿಷೇಧ ಮತ್ತು ರದ್ದತಿ) ಕಾಯಿದೆ, 1970 ಮತ್ತು ಕರ್ನಾಟಕ ನಿಯಮಗಳು, 1974 ರ ಪ್ರಾವಧಾನಗಳನ್ನು ಪಾಲಿಸತಕ್ಕದು ಮತ್ತು ಯಾವುದೇ ಪ್ರಾವಧಾನಗಳನ್ನು ಉಲ್ಲಂಘಿಸಿದಲ್ಲಿ ಕಾರ್ಮಿಕ ಇಲಾಖೆಯ ಕಾಯಿದೆಯಡಿ ನೇಮಕಗೊಂಡಿರುವ ನಿರೀಕ್ಷಕರು ತೆಗೆದುಕೊಳ್ಳುವ ಕಾನೂನು ಕ್ರಮಗಳಿಗೆ ಖುದ್ದು ಟೆಂಡರ್‌ದಾರರು/ಗುತ್ತಿಗೆದಾರರು ಹೊಣೆಗಾರರಾಗಿರಬೇಕು. ಕಾಲಕ್ಕೆ ಕಾಲಕ್ಕೆ ಸಲ್ಲಿಸಬೇಕಾದ ವರದಿಗಳನ್ನು ಕಾರ್ಮಿಕ ಇಲಾಖೆಗೆ ಸಲ್ಲಿಸುವುದು ಗುತ್ತಿಗೆದಾರರ ಹೊಣೆಯಾಗಿರುತ್ತದೆ.

b) ಟೆಂಡರುದಾರರು/ಗುತ್ತಿಗೆದಾರರು ಪ್ರತಿ ತಿಂಗಳು ಈ ನೌಕರರಿಗೆ ಸಂಬಂಧಿಸಿದಂತೆ ಅನುಬಂಧದಲ್ಲಿ ಹೇಳಿರುವ ವಿವರದಂತೆ ನೌಕರನಿಗೆ ವೇತನ ನೀಡುವುದು ಮತ್ತು ಕಡಿತಗಳನ್ನು ಸಂಬಂಧಪಟ್ಟ ನೌಕರರ ವೈಯಕ್ತಿಕ ಖಾತೆಗಳಿಗೆ ಜಮಾ ಮಾಡುವುದು. ಇವೆಲ್ಲವನ್ನು ಪೂರ್ವಭಾವಿಯಾಗಿ ತಮ್ಮ ಸ್ವಂತ ಹಣ ಭರಿಸಿ ಟೆಂಡರ್‌ದಾರರು ಹಣ ಪಾವತಿಸತಕ್ಕದ್ದು, ಈ ರೀತಿ ಪಾವತಿಸಿದ ಕಡಿತಗಳ ವಿವರಗಳನ್ನು ಆ ತಿಂಗಳು ಮುಗಿದ ನಂತರ ಸಂಬಂಧಪಟ್ಟ ರಶೀದಿ/ಚಲನ್‌ಗಳ ದಾಖಲೆಗಳನ್ನು ಹಾಜರುಪಡಿಸಿ ಈ ಎಲ್ಲಾ ಹಣವನ್ನು ಇಲಾಖೆಯಿಂದ ಮರುಪಾವತಿ ಮಾಡಿಕೊಳ್ಳುವುದು. ಯಾವುದೇ ಕಾರಣಕ್ಕೂ ಮರುಪಾವತಿ ಇಲ್ಲದೇ ಮುಂಗಡವಾಗಿ ಟೆಂಡರ್ ದಾರರಿಗೆ ಹಣವನ್ನು ನೀಡಲಾಗುವುದಿಲ್ಲ.

c) ಇಲಾಖೆ ಮತ್ತು ಟೆಂಡರ್‌ದಾರರ/ಗುತ್ತಿಗೆದಾರರ ಮಧ್ಯೆ ಗುತ್ತಿಗೆ ಅವಧಿಯಲ್ಲಿ ಅಥವಾ ಗುತ್ತಿಗೆ ನಂತರ ಉದ್ಭವಿಸಬಹುದಾದ ತಕರಾರುಗಳನ್ನು ಸ್ಥಳೀಯ ನ್ಯಾಯಾಲಯದಲ್ಲಿ ಮಾತ್ರ ಬಗೆಹರಿಸುವುದು.

d) ಟೆಂಡರುದಾರರಿಗೆ ಇಲಾಖೆಯಿಂದ ಹಣವನ್ನು ಮರುಪಾವತಿ ಮಾಡುವಲ್ಲಿ ವಿಭಾಗೀಯ ಕಛೇರಿಯಲ್ಲಿ ಲಭ್ಯವಿರುವ ಹಣಭರವಸೆ ಪತ್ರವನ್ನೊಳಗೊಂಡಿರುತ್ತದೆ. ಈ ಬಗ್ಗೆ ಟೆಂಡರುದಾರರು ವಿಭಾಗೀಯ ಕಛೇರಿಯ ಮೇಲೆ ಯಾವುದೇ ಒತ್ತಡವನ್ನು ಹೇರುವಂತಿಲ್ಲ.

e) ಟೆಂಡರ್‌ದಾರರು/ಗುತ್ತಿಗೆದಾರರು ಯಾವುದೇ ಕಾರಣಕ್ಕೂ ವೇತನ ಪಾವತಿಯನ್ನು ವಿಳಂಬ ಮಾಡುವಂತಿಲ್ಲ. ಹಾಗೆ ಮಾಡಿದ್ದಲ್ಲಿ ಇದು ಟೆಂಡರ್ ಷರತ್ತು ಉಲ್ಲಂಘನೆ ಎಂದು ಪರಿಗಣಿಸಿ ಟೆಂಡರ್ ರದ್ದು ಮಾಡಲಾಗುವುದು.

f) ಇ.ಎಸ್.ಐ, ಇ.ಪಿ.ಎಫ್. ವೃತ್ತಿ ತೆರಿಗೆ ಮತ್ತು ಸೇವಾ ತೆರಿಗೆಗಳ ಕಡಿತಗಳನ್ನು ನೌಕರನ ವಂತಿಗೆಯಿಂದ ಕಟಾವು ಮಾಡಿ ಅವುಗಳನ್ನು ಜಮಾ ಮಾಡದಿದ್ದಲ್ಲಿ ಅದು ಕ್ರಿಮಿನಲ್ ಅಪರಾಧವಾಗಿದ್ದು, ಶಿಕ್ಷಾರ್ಹವಾಗಿರುತ್ತದೆ ಮತ್ತು ಈ ಹಣ ದುರುಪಯೋಗದ ಮೇಲೆ

ಟೆಂಡರ್‌ದಾರನ/ಗುತ್ತಿಗೆದಾರನ ಮೇಲೆ ಇಲಾಖೆಯು ಕ್ರಿಮಿನಲ್ ಮೊಕದ್ದಮೆ ದಾಖಲು ಮಾಡಲು ಹಕ್ಕುಳ್ಳವರಾಗಿರುತ್ತಾರೆ.

g) ಟೆಂಡರ್‌ದಾರರು/ಗುತ್ತಿಗೆದಾರರು ತಾನು ಪಡೆದ ಗುತ್ತಿಗೆಯನ್ನು ಬೇರೆಯವರಿಗೆ ವರ್ಗಾಯಿಸಬಾರದು ಮತ್ತು ಉಪಗುತ್ತಿಗೆ ನೀಡಬಾರದು. ಇದು ಟೆಂಡರ್ ಷರತ್ತಿನ ಉಲ್ಲಂಘನೆ ಆಗುತ್ತದೆ.

h) ಟೆಂಡರ್ ಸಲ್ಲಿಸಿದ ಮಾತ್ರಕ್ಕೆ ಈ ಕಾರ್ಯದ ಒಪ್ಪಂದವನ್ನು ಸಾಧಿಸುವಂತಿಲ್ಲ. ಯಾವುದೇ ಕಾರಣ ನೀಡದೇ ಟೆಂಡರ್‌ನ್ನು ಒಪ್ಪಿಕೊಳ್ಳುವ ಅಥವಾ ತಿರಸ್ಕರಿಸುವ ಅಧಿಕಾರವು ಟೆಂಡರ್ ಆಹ್ವಾನಿಸಿದ ಪ್ರಾಧಿಕಾರಕ್ಕೆ ಇರುತ್ತದೆ.

i) ಈ ಟೆಂಡರ್‌ನಲ್ಲಿ ತಿಳಿಸಿದ ನಿಬಂಧನೆಗಳಲ್ಲದೆ ಟೆಂಡರ್‌ದಾರರು ತಮ್ಮದೇ ಅದ ಟೆಂಡರ್ ನಿಬಂಧನೆಗಳನ್ನು ಸೂಚಿಸಿದ್ದಲ್ಲಿ (ಕಂಡೀಶನಲ್ ಟೆಂಡರ್) ಅಂತಹ ಟೆಂಡರ್‌ನ್ನು ಸ್ವಯಂ ತಿರಸ್ಕೃತ ಎಂದು ಭಾವಿಸಲಾಗುವುದು.

j) ನೌಕರನಿಗೆ ವೇತನವನ್ನು ಆರ್‌ಟಿಜಿಎಸ್ ಮುಖಾಂತರ ಪ್ರತಿ ತಿಂಗಳ 5ನೇ ತಾರೀಖಿನೊಳಗೇ ತಪ್ಪದೇ ಅವರ ಅವರ ಬ್ಯಾಂಕ್ ಖಾತೆಗೆ ಜಮೆ ಮಾಡುವ ಮೂಲಕ ಪಾವತಿಸಬೇಕು. ವಿವಿಧ ವಂತಿಕೆಗಳ ಕಡಿತಗಳನ್ನು ಮಾಡಿದ ಬಗ್ಗೆ ನೌಕರನಿಗೆ 6 ತಿಂಗಳಿಗೊಮ್ಮೆ ಸಂಬಂಧಪಟ್ಟ ಇಲಾಖೆಯಿಂದ ಸ್ಟೇಟ್‌ಮೆಂಟ್ ಪಡೆದು ನೌಕರರಿಗೆ ನೀಡುವುದು. ಪ್ರತಿ ತಿಂಗಳು ವೇತನದ ಚೀಟಿಯನ್ನು ಸಿಬ್ಬಂದಿಗಳಿಗೆ ಗುತ್ತಿಗೆದಾರರು ನೀಡಿ ಅದರ ಪ್ರತಿಯನ್ನು ನಿರ್ವಹಿಸತಕ್ಕದು.

k) ಎಲ್ಲಾ ಟೆಂಡರ್ ಷರತ್ತುಗಳನ್ನು ಪಾಲಿಸುವುದಾಗಿಯೂ ಸರ್ಕಾರದ ನಿಯಮಾವಳಿಯನುಸಾರ ಛಾಪಾ ಕಾಗದದಲ್ಲಿ ಗುತ್ತಿಗೆ ಕರಾರು ಒಪ್ಪಂದಕ್ಕೆ ಸಹಿ ಮಾಡಬೇಕು.

l) ಈ ಮೇಲಿನ ಯಾವುದೇ ಷರತ್ತುಗಳನ್ನು ಉಲ್ಲಂಘಿಸಿದ್ದಲ್ಲಿ ಇಲಾಖೆಯು ಅವರಿಗೆ ಒಂದು ತಿಂಗಳ ಮುಂಚಿತವಾಗಿ ಲಿಖಿತ ನೋಟಿಸ್ ನೀಡಿ ಗುತ್ತಿಗೆಯನ್ನು ರದ್ದುಪಡಿಸುವ ಅಧಿಕಾರವನ್ನು ಹೊಂದಿರುತ್ತದೆ. ಇದೇ ರೀತಿ ಗುತ್ತಿಗೆದಾರರು ಗುತ್ತಿಗೆ ಕಾರ್ಯವನ್ನು ನಿಲ್ಲಿಸುವುದಿದ್ದಲ್ಲಿ ಕನಿಷ್ಟ 2 ತಿಂಗಳ ಮುಂಚೆ ಸಕಾರಣಗಳೊಂದಿಗೆ ಈ ಕೆಳಕಂಡ ಅಧಿಕಾರಿಗೆ ವರದಿ ನೀಡುವುದು.

ಕಾರ್ಯನಿರ್ವಾಹಕ ಇಂಜಿನಿಯರ್,
ರಾಷ್ಟ್ರೀಯ ಹೆದ್ದಾರಿ ವಿಭಾಗ,
ಬೆಂಗಳೂರು

# ಅನುಬಂಧ –3

## ಹೊರಗುತ್ತಿಗೆ ಆಧಾರದಲ್ಲಿ ನೇಮಕ ಮಾಡಬೇಕಾದ ನೌಕರರ ವಿವರ

| Sl.No | Types of Personnel | No. of person engaged | Points / Location |
|---|---|---|---|
| 1 | Driver | 1 | QC/QC Laboratory |
| 2 | Watchmen | 1 | |
| 3 | Lab assistant | 2 | |
| 4 | Typist/computer operator | 1 | |

ಕಾರ್ಯನಿರ್ವಾಹಕ ಇಂಜಿನಿಯರ್,
ರಾಷ್ಟ್ರೀಯ ಹೆದ್ದಾರಿ ವಿಭಾಗ,
ಬೆಂಗಳೂರು

# ಅನುಬಂಧ–3ಎ

# ಅನುಬಂಧ–3ಎ

| Particulars | Labouratory Assistant - 2 Nos | Computer Operator- 1 No | Watchman -1 No | Driver - 1 No |
|---|---|---|---|---|
| | Zone-I | | | |
| | Per Month/Person (30 days) | Per Month/Person (30 days) | Per Month/Person (30 days) | Per Month/Person (30 days) |
| **BASIC+VDA** | 26744.87 | 29316.27 | 24407.23 | 29316.27 |
| **PF** Employee Contribution on Rs.15000*12%) | 1800 | 1800 | 1800 | 1800 |
| **ESI** Employee Contribution on Rs. Rs.21000.00 ( 0.75%) | 158 | 158 | 158 | 158 |
| PT | 200 | 200 | 200 | 200 |
| **Net Payable to Candidate** | **24586.87** | **27158.27** | **22249.23** | **27158.27** |
| **Billing Amount to department** | | | | |
| BASIC+VDA | 26744.87 | 29316.27 | 24407.23 | 29316.27 |
| PF Employer Contribution on Rs.15000*13%) | 1950 | 1950 | 1950 | 1950 |
| ESI Employer Contribution on Rs.21000.00 3.25% | 682.5 | 682.5 | 682.5 | 682.5 |
| **Total** | **29377.37** | **31948.77** | **27039.73** | **31948.77** |
| Total No of Post Working | 2 | 1 | 1 | 1 |
| **Amount for One Month** | **58754.74** | **31948.77** | **27039.73** | **31948.77** |
| | | | | |
| **Total Amount Estimated for Financial Year 2026-27** | | **1796304.00** | | |

# Annexure – 4

## QUALIFICATION

| Sl. No. | Designation | No. of Posts | Qualification |
|---|---|---|---|
| 1 | Typist/Computer Operator | 1 | The personnel deployed as Computer Operators should have passed minimum qualification of PUC with knowledge of Computer and Computer typing skill not less than 35 words per minute both in Kannada and English, along with service motivation, time management, good mannerism, towards providing good service, punctual in attendance They shall be well versed with MS office, Word, Excel and Power Point Programming. Age should between 18 - 60 years. |
| 2 | Driver | 1 | S.S.L.C. Pass and Driving License issued by RTO - Age - 18-60 years |
| 3 | Laboratory Assistant | 2 | S.S.L.C. Pass - Age - 18-60 years |
| 4 | Watchmen | 1 | 8th Pass |
| **Total** | | **5** | |